# ಮಾಯಾ

ಡಾ. ಕೆ.ಎಲ್. ಪ್ರಸನ್ನಾಕ್ಷೀ

**"ಯಾ ಮಾ ಸಾ ಮಾಯಾ"—"ಯಾವುದು ಇಲ್ಲವೋ ಅದು ಮಾಯೆ"—ಎಂದು ಸಾಮಾನ್ಯವಾಗಿ ಹೇಳುವುದುಂಟು. ಇಂತಹ ಮಾಯೆಯ ಸ್ವರೂಪದ ಹೊಳಹನ್ನು ನೀಡಿರುವ ಶ್ರೀಮತಿ ಪ್ರಸನ್ನಾಕ್ಷಿಯವರು ಮೈಸೂರು ರಾಮಕೃಷ್ಣ ಆಶ್ರಮದ ಭಕ್ತರು.**

ಜೀವಿಗಳಲ್ಲಿ ಸರಿತಪ್ಪುಗಳನ್ನು, ಯುಕ್ತಾಯುಕ್ತತೆಯನ್ನು, ಒಳಿತು ಕೆಡುಕುಗಳನ್ನು ವಿಭಾಗಿಸಿ ತಿಳಿದುಕೊಳ್ಳುವ ವಿವೇಕದಿಂದ ಕೂಡಿದ "ಬುದ್ಧಿ" ಎಂಬುದಿದ್ದಾಗ್ಯೂ—ಅದೇನು ಮಂಕು ಕವಿದು ಕೊಂಡಿತ್ತೋ ಹಾಗೆ ನಡೆದುಕೊಂಡೆ; ಅವರು ಹಾಗೆ ಮಾಡ ಬಾರದಿತ್ತು, ಅಷ್ಟೂ ಯೋಚಿಸಲಾಗಲಿಲ್ಲವೆ?—ಎಂದೆಲ್ಲ ವಿಮರ್ಶೆಗೆ ಒಳಗಾಗುವಂತೆ ಮಾನವ ನಡೆದುಕೊಳ್ಳುವುದುಂಟು. ಇದಕ್ಕೆ ಕಾರಣವೇನು? ಮಾಯೆ. ಏನೀ ಮಾಯೆ, ಇದನ್ನರಿಯು ವುದು ಹೇಗೆ, ಎಂಬ ಪ್ರಶ್ನೆಗಳು ಮೂಡುತ್ತವೆ. ಮಾಯೆಯ ಮಹಿಮೆಯನ್ನು, ಉದ್ದ ಅಗಲಗಳನ್ನು, ಗಾಂಭೀರ್ಯವನ್ನು ಅವಳ ಪತಿಯಾದ, ಪ್ರಿಯಕರನಾದ ಸಾಕ್ಷಾತ್ ನಾರಾಯಣನೇ ಅರಿಯಲಾರ ಎನ್ನುತ್ತಾರೆ ಮಹಾತ್ಮರು. ವೇದಾಂತ ಶಾಸ್ತ್ರಗಳು ಅದನ್ನು ಸ್ಪಷ್ಟಪಡಿಸಲು ಯತ್ನಿಸಿವೆ. ಇದರ ಸ್ವರೂಪ ಸ್ವಭಾವ ಗಳೇನೆಂದು ಮನುಷ್ಯ ಬೌದ್ಧಿಕವಾಗಿ ಅರಿಯಬಲ್ಲನೇ ಹೊರತು ತಾತ್ತ್ವಿಕವಾಗಿ, ಅನುಭೂತಿಯಲ್ಲಿ ಅದನ್ನು ತಿಳಿದು ಅದನ್ನು ದಾಟಿ ಹೋಗುವುದು ಅತ್ಯಂತ ಕಷ್ಟಸಾಧ್ಯವೇ ಸರಿ.

ದೂರದಲ್ಲಿ ಉದ್ದವಾಗಿ ಬಿದ್ದಿರುವ ಒಂದು ವಸ್ತು ಹಾವಿ ನಂತೆ ಕಾಣುತ್ತದೆ. ಹಾಗೆ ಕಂಡ ಜ್ಞಾನವೇ ನಿಜ ಎಂಬಂತೆ ತೋರ್ಪಡಿಸಿಕೊಳ್ಳುವುದು ಮಾಯೆ. ಆದರೆ ಅಂತಸ್ಸತ್ವ ಬೇರೆಯೇ ಆಗಿರುತ್ತದೆ. ಬೇಡ (ಮಾ) ಬೇಡ (ಮಾ), ಈ ಕೂಪದಲ್ಲಿ ಬೀಳ ಬೇಡ ಎಂದು ಎಚ್ಚರಿಸುವುದು ಮಾಯೆ. ಲೋಕದಲ್ಲಿ ಸೃಷ್ಟ ವಾದ ಎಲ್ಲ ಪದಾರ್ಥಗಳ ಗುಣ, ಸ್ವರೂಪ, ಸ್ವಭಾವಾದಿಗಳ ಜ್ಞಾನ ಮಾಯೆ.

೧. ವಿಶ್ವಾ ಹಿ ಮಾಯಾ ಅವಸಿ ಸ್ವಧಾ ವಃ
(*ತೈತ್ತಿರೀಯ ಆರಣ್ಯಕ*..)

೨. ಯಾಶ್ಚ ಮಾಯಾ ಮಾಯಿನಾಂ ವಿಶ್ವಮಿನ್ವ ತ್ವೇ ಸಂದಧುಃ ಪೃಷ್ಮಬಂಧೋ
(*ತೈತ್ತಿರೀಯ ಸಂಹಿತಾ* ೩.೧.೧೧)

೩. ಅಧಾರಯತ್ ಪೃಥಿವೀಂ ವಿಶ್ವಧಾಯ ಸಮಸ್ತಭ್ನಾನ್ ಮಾಯಯಾ ದ್ಯಾಮವಸ್ರಸಃ
(*ಋಗ್ವೇದ* , ೨.೧೭.೫)

ಇತ್ಯಾದಿ ಶ್ರುತಿ ವಾಕ್ಯಗಳು—ಸಂತೋಷವುಂಟುಮಾಡು ವಂತಹುದು, ಪ್ರತ್ಯಕ್ಷದಲ್ಲಿ ಹೇಗೆ ಕಾಣುತ್ತದೋ ಹಾಗೆ ಅಂತರ್ಯದಲ್ಲಿ ಇಲ್ಲದ್ದು, ಲೋಕವನ್ನು ಧರಿಸುವಂತಹುದು, ರಕ್ಷಿಸುವಂತಹುದು, ಐಂದ್ರಜಾಲಿಕದಂತೆ ಒಂದು ನಾನಾ ವಿಧವಾಗಿ ಭಾಸವಾಗುವುದು "ಮಾಯೆ"— ಎಂದು ಹೇಳುತ್ತವೆ. ಬ್ರಹ್ಮವೈವರ್ತಪುರಾಣದ ೨೭ನೇ ಅಧ್ಯಾಯವಾದ ಶ್ರೀಕೃಷ್ಣಜನ್ಮ ಖಂಡವು—ಭೌತಿಕ, ಬೌದ್ಧಿಕ, ಮಾನಸಿಕ, ಆಧ್ಯಾತ್ಮಿಕ ಸಂಪತ್ತು ಗಳನ್ನು ಕೊಡುವುದು, ದಂಭ, ಅಹಂಕಾರ, ಮೋಹಾದಿ ಗಳನ್ನುಂಟುಮಾಡುವುದು, ವಿಚಿತ್ರವಾದ ಘಟಿಸಲಾಗದಂತಹವು ಗಳನ್ನು ಮಾಡುವುದು ಮಾಯೆ—ಎಂದು ತಿಳಿಸುತ್ತದೆ. ಎಣ್ಣೆ ಅಂಶ ಇರುವ ಕಡಲೆಕಾಯಿ, ಕೊಬ್ಬರಿ, ಎಳ್ಳು ಇತ್ಯಾದಿಗಳಿಂದ ಎಣ್ಣೆ ಬಂದರೆ ಅಲ್ಲಿ ಕಾರ್ಯಕಾರಣ ಭಾವ ಸ್ಪಷ್ಟ. ಆದರೆ ಅದೇ ಮಣ್ಣಿನಿಂದ ಎಣ್ಣೆ ಬಂದರೆ...? ಈ ರೀತಿ ಮಾಯೆಯ ಸ್ವಭಾವ ವಿಚಿತ್ರವಾದವುಗಳನ್ನು ಘಟಿಸುವಂತೆ ಮಾಡುವುದು. ಆದುದ ರಿಂದಲೇ ಶಂಕರರು—ಅಘಟಿತಘಟನಾ ಪಟೀಯಸೀ ಮಾಯಾ— ಎಂದಿದ್ದಾರೆ. ವರಾಹಪುರಾಣ ಮಾಯೆಯ ಮಹಿಮೆ, ಸ್ವರೂಪ, ಶಕ್ತಿ, ಸಾಮರ್ಥ್ಯಾದಿಗಳನ್ನು ತಿಳಿಸಲು "ಮಾಯಾಚಕ್ರ" ಎಂಬ ಒಂದು ಅಧ್ಯಾಯವನ್ನೇ ಮೀಸಲಿಟ್ಟಿದೆ. ಜೀವಿಯು ತನ್ನ ಕರ್ಮ ಕ್ಕನುಗುಣವಾಗಿ, ವಿವೇಕಹೀನನಾಗಿ ಯಾರಿಂದಲೋ ಎಲ್ಲಿಗೋ ಒಯ್ಯಲ್ಪಡುವಂತೆ ಮಾಡುವುದೇ ಮಾಯೆ, ಎಲ್ಲ ವಿಧ ಜೀವ ಕೋಟಿಗಳಲ್ಲೂ, ಸ್ಥಾವರ-ಜಂಗಮಗಳಲ್ಲೂ ಋತುಗಳಲ್ಲೂ ತನ್ನ ಆಕೃತಿಯನ್ನೇ ತೋರಿಸದೆ, ಸ್ವಸ್ವರೂಪವೇ ಅರಿವಿಗೆ ಬರದಂತೆ ಮಾಡುವುದೇ ಮಾಯೆ—ಎಂದು ಮಾಯೆಯ ಸ್ವಭಾವವನ್ನು ಈ ಅಧ್ಯಾಯ ವಿವರಿಸುತ್ತ ಸಾಗುತ್ತದೆ.

ಈ ಮಾಯೆಗೆ ಪ್ರಧಾನ, ಪ್ರಕೃತಿ, ಅವಿದ್ಯೆ, ಅಜ್ಞಾನ ಇತ್ಯಾದಿ ಬೇರೆ ಬೇರೆ ಹೆಸರುಗಳಿದ್ದು, ಅವೆಲ್ಲವೂ ಮಾಯೆಯ ಸ್ವಭಾವ ಸೂಚಕಗಳೇ ಆಗಿವೆ. ಎಲ್ಲ ವಿಧ ಕಷ್ಟನಷ್ಟಗಳಿಗೆ, ದ್ವಂದ್ವ ಭಾವ ಗಳಿಗೆ ಮೂಲವಾದ—"ನಾನು+ನನ್ನದು" ಎಂಬ ಭಾವನೆಗೆ ಕಾರಣ ವಾದುದು ಮಾಯೆ. ಅದು ದ್ರಷ್ಟ–ನೋಡುವವನನ್ನೂ, ದೃಶ್ಯ– ನೋಟವನ್ನೂ ಒಂದೇ (ಅಭಿನ್ನ) ಎಂದು ತಿಳಿಯುವಂತೆ ಮಾಡು ತ್ತದೆ. ಇದು ಹೇಗೆ ಸಾಧ್ಯ? ನಾನು ಹಸುವನ್ನು ನೋಡುತ್ತೇನೆ ಎಂದಿಟ್ಟುಕೊಳ್ಳೋಣ. ನೋಡುವವ ನಾನು, ನೋಟವಾದ ಹಸು ವನ್ನು ನಾನೇ ಎಂದು ತಿಳಿಯುತ್ತೇನೆಯೇ? ಖಂಡಿತಾ ಇಲ್ಲ. ಅದು ಮೂರ್ಖತನ ಎನ್ನಿಸುತ್ತದೆ. ಆದರೆ ನಾವು ಈ ಭವಬಂಧದಲ್ಲಿ ಸೆರೆ ಸಿಕ್ಕಿರುವುದೇ ಈ ಅಭೇದ ಜ್ಞಾನದಿಂದ. ಶರೀರ (ನೋಟ), ಶರೀರದೊಳಗಿರುವ ಚೈತನ್ಯ (ನೋಡುವವ) ಈ ಎರಡನ್ನೂ ಬೇರೆ ಅಲ್ಲ ಒಂದೇ ಎಂದು ನಾವು ತಿಳಿದಿಲ್ಲವೇ? ಅದೇ ಮಮಕಾರಾದಿ ಗಳಿಗೆ, ಅದರಿಂದ ಉಂಟಾಗುವ ಸುಖದುಃಖ, ಲಾಭ, ನಷ್ಟ, ಮಾನಾಪಮಾನಾದಿಗಳಿಗೆ ಕಾರಣ ಆಗಿ, ನಮ್ಮನ್ನು ಇಲ್ಲೇ

ಸಂಸಾರದಲ್ಲಿ ಸುತ್ತುತ್ತಲೇ ಇರುವಂತೆ ಮಾಡುತ್ತಿರುವುದು. ಇದನ್ನು ತಿಳಿಯಲಾರದೆ ಇರುವುದೇ ಮಾಯೆ.

ಇದಕ್ಕೆ ಕಾರಣ ಮಾಯೆಯ ಆವರಣ ಮತ್ತು ವಿಕ್ಷೇಪ ಎಂಬ ಎರಡು ಶಕ್ತಿಗಳು. ಆವರಣ, ಎಂದರೆ ಮುಚ್ಚುವುದು, ಮರೆಮಾಡುವುದು. ಮಾಯೆಯ ಈ ಶಕ್ತಿಯೇ ಸೃಷ್ಟಿಯ ವಿಕಾಸಕ್ಕೆ ಕಾರಣ, ಮರೆಯಿಲ್ಲದಿದ್ದರೆ ಸೃಷ್ಟಿ ಮುಂದುವರೆಯಲು ಸಾಧ್ಯವಿಲ್ಲ. ಬೀಜ ಮಣ್ಣಿನಲ್ಲಿ ಮರೆಯಾದರೇನೇ ಮೊಳಕೆ ಚಿಗುರು ಇತ್ಯಾದಿ. ಆದರೆ ಮಾಯೆಯ ಈ ಶಕ್ತಿಯೇ ಪರಿಪೂರ್ಣನನ್ನು ಅಪರಿಪೂರ್ಣನೆಂದು ತಿಳಿಯುವಂತೆ ಮಾಡುವುದು. ಒಂದು ನಿರ್ದಿಷ್ಟ, ದೂರದಲ್ಲಿನ ಪದಾರ್ಥವನ್ನು ನೋಡಬಲ್ಲ ಕಣ್ಣಿನ ಮುಂದೆ ಒಂದು ಸಣ್ಣ ಬೆರಳು ಅಡ್ಡ ಬಂದರೆ ಕಣ್ಣು ಏನನ್ನೂ ಗ್ರಹಿಸಲಾಗದಂತೆ ಹೇಗೆ ಆಗುವುದೋ ಹಾಗೆ ಈ ಮಾಯೆ ಸರ್ವವ್ಯಾಪಿಯಾದ, ವಿಭುವಾದ, ಆತ್ಮನನ್ನು ಮರೆಮಾಡುತ್ತದೆ. ಮಾಯೆಯ ಈ ಗುಣದಿಂದಲೇ ಸಂಸಾರಿಯಲ್ಲದವನು ಸಂಸಾರಿಯಾಗಿಯೂ ಅಸಂಗಿಯು ಸಂಗಿಯಾಗಿಯೂ ದುಃಖಿಯಲ್ಲದವನು ದುಃಖಿ ಎಂಬಂತೆಯೂ ಭಾಸವಾಗುತ್ತಾನೆ.

ವಿಕ್ಷೇಪ ಎಂದರೆ ಇಡುವುದು. ಹಗ್ಗ ಸರ್ಪದ ಹಾಗೆ ಗೋಚರಿಸುವಂತೆ ತನ್ನ ಶಕ್ತಿಯನ್ನು ಅಲ್ಲಿ ಇರಿಸುತ್ತದೆ. ಮಾಯೆ ಸುರುಳಿಸುತ್ತಿ ಇಟ್ಟ ಚಿತ್ರಪಟದಂತೆ. ಅದು ಕೇವಲ ಒಂದು ಕೋಲಿನಂತೆ ಭಾಸವಾಗುತ್ತದೆ. ಅದರಲ್ಲಿರುವ ಯಾವ ಚಿತ್ರಗಳೂ ಬಣ್ಣಗಳೂ ಗೋಚರಿಸುವುದಿಲ್ಲ, ಅಷ್ಟೇ ಅಲ್ಲ, ಅದರ ಮೂಲರೂಪ ಚಿತ್ರಪಟ ಎಂಬ ಅರಿವೂ ಬರದೆ ಅದು ಕೋಲು ಎನ್ನುವ ಅರಿವು ಬರುವಂತೆ ಮಾಡುವುದು ಈ ವಿಕ್ಷೇಪ ಶಕ್ತಿ. ಚಿತ್ರಪಟದ ಸುರುಳಿ ಬಿಚ್ಚಿದಾಗ, ಅದರಲ್ಲಿರುವ ನಾನಾ ಚಿತ್ರಗಳೂ ವಿವಿಧ ಬಣ್ಣಗಳೂ ಭಾವಗಳೂ ಅದರಿಂದ ತಿಳಿದು ಬರುವ ವಿಚಾರಗಳೂ ಬೋಧವಾಗುತ್ತವೆ.

ಮಾಯೆಯ ಸ್ವರೂಪವನ್ನು ಸ್ವಾಮಿ ವಿವೇಕಾನಂದರು ಒಂದು ಕಥೆಯ ಮೂಲಕ ವಿವರಿಸುತ್ತಾರೆ. ನಾರದನು ಶ್ರೀಕೃಷ್ಣನನ್ನು "ಭಗವಾನ್, ಮಾಯೆಯನ್ನು ತೋರು" ಎಂದು ಒಮ್ಮೆ ಕೇಳಿದನಂತೆ. ಕೆಲವು ದಿನಗಳಾಯಿತು. ಶ್ರೀಕೃಷ್ಣ ನಾರದನನ್ನು ಮರಳುಗಾಡಿನ ಕಡೆ ತನ್ನೊಡನೆ ಬರುವಂತೆ ಹೇಳಿದ. ಕೆಲವು ಮೈಲಿಗಳಷ್ಟು ಹೋದಮೇಲೆ ಕೃಷ್ಣ "ನಾರದ, ನನಗೆ ಬಾಯಾರಿಕೆಯಾಗಿದೆ; ಸ್ವಲ್ಪ ನೀರು ತರುವೆಯಾ?" ಎಂದ. "ತಕ್ಷಣ ಹೋಗಿ ತರುತ್ತೇನೆ ಸ್ವಾಮಿ" ಎಂದು ನಾರದ ಹೊರಟ. ಸ್ವಲ್ಪ ದೂರದಲ್ಲಿ ಒಂದು ಹಳ್ಳಿ ಇತ್ತು. ನೀರನ್ನು ಹುಡುಕಿಕೊಂಡು ಹಳ್ಳಿಯನ್ನು ಪ್ರವೇಶಿಸಿದ. ಒಂದು ಮನೆಯ ಬಾಗಿಲನ್ನು ತಟ್ಟಿದಾಗ ಒಬ್ಬಳು ಅತಿ ಸುಂದರಿಯಾದ ಯುವತಿ ಬಾಗಿಲು ತೆರೆದಳು. ಅವಳನ್ನು ನೋಡಿದೊಡನೆ ತನ್ನ ಸ್ವಾಮಿ ನೀರಿಗಾಗಿ ಕಾಯುತ್ತಿರುವನು, ಅದಕ್ಕಾಗಿ ಪ್ರಾಣ ಬಿಡುವನು ಎಂಬುದನ್ನು ಆತ ಸಂಪೂರ್ಣವಾಗಿ ಮರೆತು ಆ ಹುಡುಗಿಯೊಡನೆ ಮಾತನಾಡಲು ಉಪಕ್ರಮಿಸಿದ. ಆ ದಿನವೆಲ್ಲ ತನ್ನ ಸ್ವಾಮಿಯ ಹತ್ತಿರಕ್ಕೆ ಹೋಗಲೇ ಇಲ್ಲ. ಮಾರನೆಯ ದಿನವೂ ಅದೇ ಮನೆಯಲ್ಲಿ ಹುಡುಗಿಯೊಂದಿಗೆ ಮಾತನಾಡುತ್ತಿದ್ದ. ಮಾತು ಪ್ರೇಮದಲ್ಲಿ ಪರ್ಯವಸಾನವಾಯಿತು. ತನಗೆ ಅವಳನ್ನು ಮದುವೆ ಮಾಡಿಕೊಡಬೇಕೆಂದು ಹುಡುಗಿಯ ತಂದೆಯನ್ನು ಕೇಳಿಕೊಂಡ. ಅನಂತರ ನಾರದ ಮದುವೆಯಾಗಿ ಹೆಂಡತಿಯೊಡನೆ ವಾಸವಾಗಿದ್ದ. ಮಕ್ಕಳೂ ಆದವು. ಹೀಗೆ ಹನ್ನೆರಡು ವರುಷಗಳು ಕಳೆದುವು. ಮಾವ ಸತ್ತುಹೋದ. ಅವನ ಆಸ್ತಿ ಇವನಿಗೆ ಬಂದಿತು. ಹೆಂಡತಿ, ಮಕ್ಕಳು, ಹೊಲ, ದನ ಇವುಗಳೊಂದಿಗೆ ತಾನು ಭಾವಿಸಿದಂತೆ ಸುಖವಾಗಿಯೇ ಇದ್ದ. ಒಂದು ಸಲ ಪ್ರವಾಹ ಬಂತು. ಒಂದು ದಿನ ರಾತ್ರಿ ನದಿ ಪ್ರವಾಹದಿಂದ ಉಕ್ಕಿ ದಡಮೀರಿ ಹರಿದು ಹಳ್ಳಿಯನ್ನು ಮುಳುಗಿಸಿತು. ಮನೆಗಳು ಬಿದ್ದವು; ಮನುಷ್ಯರು, ಪ್ರಾಣಿಗಳು ಕೊಚ್ಚಿಕೊಂಡು ಹೋದವು. ಎಲ್ಲವೂ ಪ್ರವಾಹದಲ್ಲಿ ತೇಲಿ ಹೋಗುತ್ತಿದ್ದುವು. ನಾರದ ತಪ್ಪಿಸಿಕೊಳ್ಳಬೇಕಾಯಿತು. ಒಂದು ಕೈಯಲ್ಲಿ ಹೆಂಡತಿ ಮತ್ತೊಂದು ಕೈಯಲ್ಲಿ ಇಬ್ಬರು ಮಕ್ಕಳು, ಮತ್ತೊಂದು ಮಗು ಭುಜದ ಮೇಲೆ ಹೀಗೆ ಇವರನ್ನು ಕರೆದುಕೊಂಡು ಆ ಮಹಾಪ್ರವಾಹವನ್ನು ದಾಟಲು ಯತ್ನಿಸುತ್ತಿದ್ದ. ಕೆಲವು ಅಡಿ ಹೋಗುವುದರೊಳಗಾಗಿ ಪ್ರವಾಹ ಬಲವಾಯಿತು. ಹೆಗಲ ಮೇಲಿದ್ದ ಮಗು ಬಿದ್ದು ಕೊಚ್ಚಿಕೊಂಡು ಹೋಯಿತು. ನಾರದನು ಸಹಿಸಲಾರದೆ ನಿಟ್ಟುಸಿರುಬಿಟ್ಟ. ಆ ಮಗುವನ್ನು ರಕ್ಷಿಸುವುದಕ್ಕೆ ಪ್ರಯತ್ನಿಸಿದಾಗ ಮತ್ತೊಂದು ಮಗುವಿನ ಮೇಲೆ ಇದ್ದ ಹಿಡಿತ ಸಡಿಲಾಯಿತು. ಅದೂ ಮುಳುಗಿ ಹೋಯಿತು. ತನ್ನ ಶಕ್ತಿಯನ್ನೆಲ್ಲ ಪ್ರಯೋಗಿಸಿ ಅಪ್ಪಿಕೊಂಡಿದ್ದ ಹೆಂಡತಿಯೂ ಕೊನೆಗೆ ಕೊಚ್ಚಿಕೊಂಡುಹೋದಳು. ಅಳುತ್ತ ಕರೆಯುತ್ತ ಪ್ರವಾಹದ ರಭಸಕ್ಕೆ ಸಿಕ್ಕಿ ದಡದ ಮೇಲೆ ಬಂದು ಬಿದ್ದನು. ಅವನ ಹಿಂದೆ ಒಂದು ಮೆಲುದನಿ, "ಮಗು, ನೀರೆಲ್ಲಿ? ನೀನು ಒಂದು ಚೊಂಬು ನೀರನ್ನು ತರಲು ಹೋದೆ. ನಿನಗಾಗಿ ಕಾಯುತ್ತಿರುವೆ. ನೀನು ಹೋಗಿ ಆಗಲೇ ಅರ್ಧಗಂಟೆಯ ಮೇಲಾಯಿತು" ಎಂದಿತು. "ಅರ್ಧ ಗಂಟೆ ಮಾತ್ರವೇ!" ಎಂದು ನಾರದ ಆಶ್ಚರ್ಯಪಟ್ಟನು. ಮನಸ್ಸಿನಲ್ಲಿ ಹನ್ನೆರಡು ದೀರ್ಘ ವರುಷಗಳಾಗಿದ್ದವು. ಇವೆಲ್ಲ ಕೇವಲ ಅರ್ಧಗಂಟೆಯಲ್ಲಿ ಆಗಿತ್ತು! ಇದೇ ಮಾಯೆ.

ಹೀಗೆ ಮಾಯೆ ದೃಷ್ಟೃ ದೃಶ್ಯಗಳನ್ನು ಒಂದೇ ಎಂಬಂತೆ ಮಾಡುವುದರಿಂದ ಅದನ್ನು ಅರಿಯುವುದು ಕಷ್ಟ. ಮಾಯೆಯ ಸ್ವರೂಪದ ಅರಿವಾದ ಕೂಡಲೆ ಮಾಯೆ ತನ್ನೆಲ್ಲ ಪ್ರವೃತ್ತಿಗಳನ್ನೂ ಉಪಸಂಹರಿಸಿಕೊಳ್ಳುತ್ತದೆ. ಮಾಯೆಯ ಚಮತ್ಕಾರ ಪ್ರಭಾವಗಳ ಪರಿಧಿಯಿಂದ ಹೊರಬರಲು, ಮಾಯೆಯದೇ ಕೃಪೆ ಅತ್ಯಗತ್ಯ. ಮಾಯೆಯ ಅಧಿಪತಿಯಾದ ಮಾಯಿಯ ಅನುಗ್ರಹವಿದ್ದರೂ ಸಾಕು. ಮಾಯೆ ಹಾಗೂ ಮಾಯಿಯ ಕೃಪಾಕಟಾಕ್ಷ, ಗುರುದೇವನ ಅನುಗ್ರಹದಿಂದ ದೊರೆತು ದುರ್ಲಭವಾಗಿ ದೊರೆತ ನರಜನ್ಮ ಸಾರ್ಥಕವಾಗಲಿ.